Regd. No M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂವತ್ಸರ 30 ಸಂಚಿಕೆ 267 | ಬುಧವಾರ 18—6—47 | ಬಿಡಿ ಪ್ರತಿ 6 ಪೈ

ಭಾರತದ ಹಣ ಮುಳುಗುವದೇ ?

—

ಕಳೆದ ಮಹಾಯುದ್ಧ ಕಾಲದಲ್ಲಿ ಭಾರತವು ಬ್ರಿಟನ್ನಿಗೆ ನೀಡಿದ ಧನ ಸಹಾಯವು ಅದನ್ನು ಶತ್ರುಗಳಿಂದ ಉಳಿಸಲು ಬಹುಮಟ್ಟಿಗೆ ಸಹಾಯವಾಯಿತೆಂಬ ಮಾತು ನಿರ್ವಿವಾದವಾದುದು. ಇಂಗ್ಲೆಂಡವು ಭಾರತಕ್ಕೆ 1200ದಶ ಲಕ್ಷ ಪೌಂಡುಗಳ ಸಾಲವನ್ನು ಮುಟ್ಟಿಸಬೇಕಾಗಿದೆ. ಹೊಟ್ಟೆಗಿಲ್ಲದೆ ಬಳಲುತ್ತಿರುವ ಭಾರತದ ಬಡ ಪ್ರಜೆಗಳು ಈ ಅಪಾರವಾದ ಹಣವನ್ನು ಬ್ರಿಟಿಷರಿಗೆ ಅಪರ ಕಷ್ಟಕಾಲದಲ್ಲಿ ಕೊಟ್ಟಿದ್ದಾರೆ ಕೊಟ್ಟಿದ್ದಾರೆ ಎನ್ನುವದಕ್ಕಿಂತಲೂ ಬ್ರಿಟಿಷರು ತಮಗಿರುವ ಅಧಿಕಾರ ಬಲದಿಂದ ಅದನ್ನು ಪಡೆದರು ಎಂದು ಹೇಳುವದು ಹೆಚ್ಚು ಯೋಗ್ಯವಾಗಬಹುದು. ಲಾರ್ಡ್ ಕೇನ್ಸ್ ಮೊದಲಾದ ಬ್ರಿಟಿಷ ಪ್ರತಿನಿಧಿಗಳು ಬ್ರಿಟನ್ನವು ಈ ಸಾಲವನ್ನು ಪೈಗೆ ಪೈ ಮುಟ್ಟಿಸುವದು ಎಂದು ಹೇಳಿದ್ದರು. ಆದರೆ ಡಾ. ಡಾಲ್ಟನ್ನರು ಈ ಸಾಲವು ಅನ್ಯಾಯದ್ದೂ ಅವ್ಯವಹಾರ್ಯವೂ ಆಗಿದೆಯೆಂದೂ ಅಷ್ಟೊಂದು ಹಣವನ್ನು ತಿರುಗಿ ಮುಟ್ಟಿಸುವದು ಸಾಧ್ಯವಿಲ್ಲವೆಂದೂ, ಸಾಲದ ಹಣವನ್ನು ಕಡಿಮೆ ಮಾಡಬೇಕೆಂದೂ ಕಾಮನ್ಸ್ ಸಭೆಯಲ್ಲಿ ಹೇಳಿದ್ದಾರೆ.

ಹಿಂದೀಯರ ಸತ್ಯಾಗ್ರಹ

ದಕ್ಷಿಣ ಆಫ್ರಿಕಾದಲ್ಲಿ ಹಿಂದೀಯರು ಫೆಬ್ರೋ ಕಾಯಿದೆ ವಿರುದ್ಧ ಸತ್ಯಾಗ್ರಹ ಪ್ರಾರಂಭಮಾಡಿ ಒಂದು ವರ್ಷವಾದ್ದರಿಂದ ಮುಖ್ಯಮುಖ್ಯ ಪಟ್ಟಣಗಳಲ್ಲೂ ಸತ್ಯಾಗ್ರಹ ದಿನವನ್ನಾಚರಿಸಲಾಯಿತು. ಒಂದು ವರ್ಷದ ಅವಧಿಯಲ್ಲಿ ಈ ಕಾಯಿದೆ ಮುರಿದು 1710 ಸತ್ಯಾಗ್ರಹಿಗಳು ಜೈಲಿಗೆ ಹೋಗಿದ್ದು ಅವರಿಗೆ ಎಧಿಸಲಾದ ಒಟ್ಟು ಶಿಕ್ಷೆಯು 2218 ತಿಂಗಳಾಗುವದು.

ಸಿಂಗಾಪುರದಲ್ಲಿ ಸುಭಾಸರ ಸ್ಮಾರಕ

ಸಿಂಗಾಪುರದಲ್ಲಿ ನೇತಾಜಿ ಸುಭಾಸ ಚಂದ್ರರಿಗೊಂದು ಸ್ಮಾರಕವನ್ನು 500000 ಸ್ಟ್ರೈಟ್ಸ್ ಡೊಲರ್ ಖರ್ಚು ಮಾಡಿ ಕಟ್ಟಿಸಬೇಕೆಂದು ಮಲಯದ ಹಿಂದೀಯರು ಯೋಚಿಸಿದ್ದಾರೆ. ಈ ಬಗ್ಗೆ ನಿಧಿ ಸಂಗ್ರಹಿಸುವ ನಿರ್ಣಯವು ಕುವಾಲಾ ಲಂಪರ್‌ದಲ್ಲಿ ಜರಗಿದ ಮಲಯ ಹಿಂದೀಯ ಕಾಂಗ್ರೆಸ್ ಅಧಿವೇಶನದಲ್ಲಿ ಆಗಿದೆ, ಮಾತ್ರವಲ್ಲ ಒಡನೆ 6000 ಡಾಲರ್‌ಗಳು ಸಂಗ್ರಹವಾಗಿದೆ.

'ರೆಫರೆಂಡಂ' ಗೆ ಕಾಂಗ್ರೆಸ್ ಮತ್ತು ರಕ್ತಅಂಗಿಯವರ ಬಹಿಷ್ಕಾರ

ನವದೆಹಲಿ ಜೂನ್ 16 — ಗಡಿನಾಡು ಕಾಂಗ್ರೆಸ್ ಮತ್ತು ರಕ್ತ ಅಂಗೀ ನಾಯಕರು ಬರಲಿರುವ ವಾಯುವ್ಯ ಸರಹದ್ದು ಪ್ರಾಂತ್ಯ 'ರೆಫರೆಂಡಂ' (ಮತ ಸಂಗ್ರಹ) ದಲ್ಲಿ ಭಾಗವಹಿಸುವುದಿಲ್ಲವೆಂದು ಹೇಳಲಾಗಿದೆ.

ಮತ ಸಂಗ್ರಹವನ್ನು ಬಹಿಷ್ಕರಿಸುವ ಪ್ರಥಮ ಕಾರಣ, ವಯಸ್ಕ ಪ್ರಾತಿನಿಧ್ಯವಿಲ್ಲದಿರುವುದು ದ್ವಿತೀಯ ಕಾರಣವೆಂದರೆ ಜೂನ್ 3 ರ ಬ್ರಿಟೀಷ್ ಹೇಳಿಕೆ ಪ್ರಕಾರ 'ಪಶಾಣ ಸ್ಥಾನ' ಒಪ್ಪುವುದು.

ಆಹ್ವಾನ ಪತ್ರಿಕೆ

ಬೆಂಗಳೂರು ಜೂನ್ 17 — ಆಹ್ವಾನ ಪತ್ರಿಕೆಗಳು ಇಷ್ಟೇ ಅಳತೆಗೆ ಹೆಚ್ಚಿಲ್ಲದಂತೆ ವ್ಯವಸ್ಥಾಪನವಾಗಬೇಕೆಂದೂ, ಪೇಪರ್ ಕಂಟ್ರೋಲು ಆರ್ಡರಿನಲ್ಲಿದ್ದ ನಿಬಂಧನೆಯು ತೆಗೆಯಲಾಗಿದೆ.

ಸಿಲ್ಹೆಟ್‌ನಲ್ಲಿ ಮತಸಂಗ್ರಹ

ನವದೆಹಲಿ ಜೂನ್ 16 — ಜುಲೈ ತಿಂಗಳಲ್ಲಿ ಸಿಲ್ಹೆಟ್‌ನಲ್ಲಿ ಮತ ಸಂಗ್ರಹ ನಡೆಯಲಿದೆ.

—

ತಿರುಚನಾಪಳ್ಳಿ ಜೂನ್ 16 — ದ್ರಾವಿಡ ಸ್ಥಾನವನ್ನು ನಿರ್ಮಿಸಿ, ಆದರಲ್ಲಿ ತಮಿಳುನಾಡು, ಆಂಧ್ರ ದೇಶ ಕರ್ನಾಟಕ ಕೇಂದ್ರಗಳನ್ನು ಸೇರಿಸದಿದ್ದರೆ ಚಳುವಳಿ ಮಾಡಲಾಗುವುದೆಂದು ಇಲ್ಲಿ ನಡೆದ ದ್ರಾವಿಡ ಸ್ಥಾನ ಸಮ್ಮೇಳನದಲ್ಲಿ ತೀರ್ಮಾನಿಸಲಾಗಿದೆ.

ಸಿ. ಆಗ್. ಗೌರ್ನರ್ ಆಗುವರೆ ?

ನವದೆಹಲಿ ಜೂನ್ 16 — ಆಗಸ್ಟ್ 15 ರ ನಂತರ ಭಾರತಕ್ಕೆ ಡೊಮೀನಿಯನ್ ಸ್ಥಾನಮಾನ ದೊರೆತನಂತರ ಭಾರತ ಪ್ರಾಂತ್ಯಗಳಿಗೆ ಗೌರ್ನರುಗಳನ್ನು ನೇಮಿಸಲು ಪಟ್ಟಿಯನ್ನು ಕೊಡಿರಿ ಎಂದು ಪಂ| ನೆಹರು ಮತ್ತು ಜಿನ್ನಾ ಕೇಳಿಲ್ಪಟ್ಟಿರುವುದಾಗಿ ಗೊತ್ತಾಗಿದೆ

ಶ್ರೀ ಸಿ. ರಾಜಗೋಪಾಲಚಾರಿ, ಶ್ರೀ ಬಾಬಾ, ಸರ್ ರಾವ್ ಸರ್ ಗೋಪಾಲಸ್ವಾಮಿ ಅಯ್ಯಂಗಾರ್ ಮತ್ತು ನ್ಯಾ|| ರಾವ್‌ಲಾಲ್ ಇವರು ಕಾಂಗ್ರೆಸ್ ಪಟ್ಟಿಯಲ್ಲಿದ್ದಾರೆ.

ಲಂಡನ್ ಜೂನ್ 16 — ಪಾಕೀ ಸ್ಥಾನ ಬ್ರಿಟೀಷ್ ಸಂಸ್ಥಾನಗಳನ್ನು ಹಿಂದೂಸ್ಥಾನಕ್ಕಿಂತ ಹೆಚ್ಚು ಕೊಳ್ಳುತ್ತದೆ. ಕಚ್ಚಾ ಪದಾರ್ಥಗಳನ್ನು ಬ್ರಿಟನ್ನಿಗೆ ಹೆಚ್ಚು ರಫ್ತು ಮಾಡುತ್ತದೆ ಎಂದು ಮುಸ್ಲಿಂ ವಾಣಿಜ್ಯ ಸಂಘದ ಆವರಣದಿಂದ ಕೇಳಿ ಬರುತ್ತಿದೆ.

ಲಾಹೋರ್ ಜೂನ್ 16 — ಲಾಹೋರಿನಲ್ಲಿ ಈ ದಿವಸ ಕೋಮು ಗಲಭೆ ಎದ್ದಿತು. ನಗರದ ನಾನಾ ಭಾಗಗಳಲ್ಲಿ ಅರ್ಧ ಡಜನ್ ಬಾಂಬುಗಳು ಸಿಡಿದವು. ಸಾಹಾಲ್ಮಿದ್ವಾರದ ಹೊರ-ಭಾಗದಲ್ಲಿರುವ ಆಸ್ಪತ್ರೆ ಬಳಿ ತೀವ್ರ ಅಸ್ಫೋಟನೆ ಜರುಗಿ 46 ಮಂದಿ ಗಾಯಗೊಂಡರು. ಮೂವರು ಸ್ಥಿತಿ ಚಿಂತಾಜನಕ, ಡೆಪ್ಯುಟಿ ಪೋಲೀಸ್ ಸೂಪರಿಂಡೆಂಟರಿಗೆ ಗಾಯವಾಗಿದೆ.

29 ರಲ್ಲಿ ಸಂಯುಕ್ತ ಅಧಿವೇಶನವೆ ?

ಬೆಂಗಳೂರು ಜೂನ್ 17

ಇದೇ ತಾ|| 29 ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆ ಇವುಗಳ ಸಂಯುಕ್ತ ಅಧಿವೇಶನ ಸೇರಿ ಭಾರತ ರಾಜ್ಯಾಂಗ ರಚನಾ ಸಭೆಗೆ ಪ್ರತಿನಿಧಿಗಳನ್ನು ಚುನ್ನಾಯಿಸಲಾಗುವುದು — ಎಂದು ಬಹಳ ಪ್ರಬಲವಾದ ವದಂತಿಯೆದ್ದಿದೆ.

ರಾಜ್ಯಾಂಗ ಸಭೆಗೆ ಮೈಸೂರು ಭಾಗಿಯಾಗುವುದು ಎಂದು ಖಿರ್ವಾ ನಾಹೇಬರು ಪತ್ರಿಕಾಗೋಷ್ಠಿಯಲ್ಲಿ ಅರುಹಿದ ವಿಷಯ ಸಂಸ್ಥಾನಾದ್ಯಂತ ಖಿನ್ನತೆ ಹುಟ್ಟಿಸಿದೆ. ದಿವಾನರವರ ನಾಯಕತ್ವದಲ್ಲಿ ಮೈಸೂರು ರಾಜ್ಯಾಂಗ ಸಭೆಯನ್ನು ಪ್ರವೇಶಿಸಿ ಮೈಸೂರು ಪ್ರಗತಿ ಪಥದಲ್ಲಿ ಮುಂಚೂಣಿಯಲ್ಲಿ ನಿಂದು ಇಡೀ ದೇಶವೇ ಹಾರೈಸುತ್ತಿದೆ.

ಖಿರ್ ನಾಹೇಬ್ ಸರ್ಕಾರ ರಾಜೀನಾಮೆ ಕೊಡುವುದೇ

ನವದೆಹಲಿ ಜೂನ್ 16

ಗಡಿನಾಡಿನಲ್ಲಿ ಮತಸಂಗ್ರಹದಿಂದ ರಕ್ತಪಾತ ಮತ್ತು ದೌರ್ಜನ್ಯಗಳು ನಡೆಯುವುದೆಂದು ಗಾಂಧೀಜಿ ಹೆದರಿದ್ದಾರೆ. ಕಾಂಗ್ರೆಸ್ ಕಾರ್ಯ ಸಮಿತಿ ಮತ್ತು ಲೀಗ್ ಒಪ್ಪಂದವೇರ್ಪಟ್ಟರೂ, ಆದು ಶಾಂತಿಪೂರ್ಣವಾಗಿ ನಡೆಯಲಿ ಎಂಬುದೇ ಗಾಂಧೀಜಿಯವರ ಇಚ್ಛೆ. ಮತ ಸಂಗ್ರಹ ತಪ್ಪಿಸಲು ಕಾಂಗ್ರೆಸ್ ಕಾರ್ಯ ಸಮಿತಿ ಉದ್ದೇಶದ ರೀತ್ಯಾ ಖಾನ್ ಸರ್ಕಾರ ರಾಜೀನಾಮೆ ಕೊಡಬಹುದು ಎಂದು ರಾಜಕೀಯ ವಲಯಗಳಿಂದ ಹೊರ ಬಿದ್ದ ಸುದ್ದಿ ಇಷ್ಟು ಬ್ರಿಟೀಷ್ ಸರ್ಕಾರಕ್ಕೆ ಒಪ್ಪಿಗೆಯೋ ನಿರ್ಲಿಪ್ತಿಗೆಯೋ ಹೇಳಲಸಾಧ್ಯ !

ಹೊಲಿವುಡ್ ಚಿತ್ರಕ್ಕೆ ಸಂಯುಕ್ತ ಪ್ರಾಂತದಲ್ಲಿ ಬಹಿಷ್ಕಾರ

ಹೊಲಿವುಡ್‌ದಲ್ಲಿ ತಯಾರಾದ ಯು.ಎ. ಸ್ಟೇಟ್ಸ್ ಆರ್ಮ್ಸ್‌ದವರ 'ಸ್ಟ್ರೇಂಜ್ ವಿಕ್ಟರಿ' ಎಂಬ ಚಿತ್ರ ಪ್ರದರ್ಶನ ಸಂಯುಕ್ತ ಪ್ರಾಂತದಲ್ಲಿ ಕೂಡದೆಂದು ಅಲ್ಲಿಯ ಸರಕಾರ ಬಹಿಷ್ಕಾರ ಹಾಕಿರುವುದು.

—

ಭಾರತ ಮಂತ್ರಿಗಳಾದ ಲಾರ್ಡ್ ಲಿ ಸ್ಟೊವೆಲ್ಲರು ಅಧಿಕಾರ ದಾನ ಸಮಾರಂಭಕ್ಕಾಗಿ ಆಗಸ್ಟ್ ತಿಂಗಳಲ್ಲಿ ಹಿಂದು ಸ್ಥಾನಕ್ಕೆ ಬರಲಿರುವರಂತೆ.

ಅಂಡಮಾನವು ಹಿಂದೂಸ್ಥಾನದ್ದು

ಬ್ರಿಟಿಷ್ ಸರಕಾರದವರ ಭಾರತವನ್ನು ಬಿಟ್ಟುಹೋಗುವ ಸಿದ್ದತೆಯನ್ನು ಮಾಡುತ್ತಿರುವಾಗ, ಅಂಡಮಾನ ಮತ್ತು ನಿಕೋಬಾರ ನಡುಗಡ್ಡೆಗಳು ಬ್ರಿಟಿಷ್ ಸಂಸ್ಥಾನಕ್ಕೆ ಲಷ್ಕರೀ ಛಾವಣಿ ಮಾಡಲು ಕೊಡಲ್ಪಡುವುದೆಂದು ವಿಶ್ವಸೀಯವಾಗಿ ವಾರ್ತೆಯು ಹಬ್ಬುತ್ತಿದೆ. ಇದೊಂದು ಆಶ್ಚರ್ಯದ ಸಂಗತಿಯು. ಈ ನಡುಗಡ್ಡೆಗಳು ಮೊದಲಿನಿಂದ ಹಿಂದೂಸ್ಥಾನದವು. 1945ರ ಹಿಂದೀ ರಾಜ್ಯ ಘಟನೆಯು ಕಾಯಿದೆಯನ್ವಯ ಈ ನಡುಗಡ್ಡೆಗಳು ಅಜಮೀರ, ಮೇವಾಡ ಕೂರ್ಗ ದಂತೆ ಕಮೀಷನರ ಪ್ರಾಂತ್ಯಗಳೆಂದು ರಾಜಕಾರಭಾರನಡೆಯಬೇಕೆಂದು ಗೊತ್ತಾಗಿದೆ. ಹಿಂದೀ ರಾಜಖೈದಿ ಮತ್ತು ರಾಜಬಂದಿಗಳ ವಸಾಹತನೆಂದು ಈ ನಡುಗಡ್ಡೆಗಳು ಹಿಂದೀ ಸ್ವಾತಂತ್ರ್ಯದ ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. ಯುದ್ಧ ಮುಗಿದು ಅವುಗಳನ್ನು ಜಪಾನರ ಕೈಯಿಂದ ತೆಗೆದುಕೊಂಡ ನಂತರ ಹಿಂದೀಜನರು ಅಲ್ಲಿ ಖಾಯಂ ವಸತಿ ಮಾಡಿಕೊಳ್ಳಲು ಹೋಗಬೇಕು. ಮತ್ತು ಅಲ್ಲಿಯ ಕಟ್ಟಿಗೆ ಹಾಗೂ ಪಿಸ್ತುಗಾರಿಕೆಯ ವ್ಯಾಪಾರೋದ್ಯೋಗವನ್ನು ಬೆಳಸಬೇಕು ಎಂದು ಸರ್ಕಾರದವರು ಪತ್ರಿಕೆಗಳಲ್ಲಿ ತೆಗೆದಿದ್ದರು, ಹಾಗೂ ಪ್ರಯತ್ನ ಮಾಡಲಾಗಿತ್ತು. ಹೀಗಿದ್ದು ಒಮ್ಮೆಲೇ ಈಗ ಈ ನಡುಗಡ್ಡೆಗಳನ್ನು ಬ್ರಿಟಿಷ್ ಸರಕಾರಕ್ಕೆ ಒಪ್ಪಿಸಿದವರೆಂದರೆ ವಿಚಿತ್ರ ಸಂಗತಿಯು. ಸಿಂಹಲ ದ್ವೀಪದಲ್ಲಿ ತ್ರಿಂಕಾಮಲಿ ಉತ್ತಮ ಲಷ್ಕರಿ ಛಾವಣಿಯಾಗಿದೆ. ಅದಕ್ಕೆ ಜೋಡಿಸಿಯೆಂದು ಅಂದಮಾನ-ನಿಕೋಬಾರ ನಡುಗಡ್ಡೆಗಳನ್ನು ಕೊಡುವುದು ಯೋಗ್ಯವಲ್ಲ. ಸ್ವತಂತ್ರ ಹಿಂದೂಸ್ಥಾನ ಮತ್ತು ಬ್ರಹ್ಮದೇಶ ಇವುಗಳ ಮಧ್ಯದಲ್ಲಿ ಬ್ರಿಟಿಷ್ ಲಷ್ಕರೀ ಛಾವಣಿಯನ್ನು ಈ ನಡುಗಡ್ಡೆಗಳಲ್ಲಿ ಪ್ರಸ್ಥಾಪಿಸುವುದೆಂದರೆ ಇದು ಬ್ರಿಟಿಷರ ಸವಿಷ್ಯಯ ಚಿನ್ಹವಲ್ಲ. ಬ್ರಿಟಿಷ್ ಸಾಮ್ರಾಜ್ಯಸಾಹಯ ಅದೊಂದು ಪ್ರತೀಕವೆಂದು ಗಣಿಸಲ್ಪಡುವುದು. ಆದಕ್ಕಾಗಿ ಈ ಮಹತ್ವದ ಪ್ರಶ್ನೆಯ ಬಗ್ಗೆ ನಡುಗಾಲು ಸರಕಾರದವರು ವಿಚಾರಮಾಡುವ ಮಾತಾಗಿದೆಯೆಂದು ಹೇಳಲಾಗಿದೆ. (ಸಂ)

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1-12-0

OFFICE OF THE PRESIDENT
CITY MUNICIPAL COUNCIL
MYSORE, 9th June 1947

Notification

JUST RELEASED FROM THE PRESS

Municipal Handbook & Diary

(From 1 st March 47 to end of March 48)

A publication which should be in the hands of all the citizens of Mysore.

A publication which gives full particulars pertaining to the Municipality and also contains Diary for 12 months.

Price : **Annas Twelve only** (As. 12)

For Copies please apply to—

The President

At Opera 9th Glorious Week

RAJAKUMARI

ಟಿ. ಎಸ್. ಬಾಲಯ್ಯ, ತಪಮಣಿದೇವಿ, ಮಾಲತಿ ರಾಮಚಂದ್ರ ನಟಿಸಿರುವ

ರಾಜಕುಮಾರಿ

(ತಮಿಳು)

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯೆ ಕೈಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸ-ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ.

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂಡಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.

"ರಾಜಕುಮಾರಿಯ" ಒಂದು ದೃಶ್ಯ

Edited, Printed and Published by M. S Krishna Rao at th Satyvadi Press Chamara Agrahar, Mysore.